# ಜಟಾಧಾರಿ!



ತಲೆಯ ಮೇಲೆ ಕೂದಲಿನ ಬೆಟ್ಟವನ್ನೇ ಹೊತ್ತುಕೊಂಡಿದ್ದಾನೆ ಕ್ವಿ ಕ್ವಿಪಿಂಗ್. 82ರ ಹರೆಯದ ಈತ ಚೀನಾ ದೇಶದವನು. ಈತ ತಲೆಯಲ್ಲಿ ಹೊತ್ತಿರುವ ಈ ಜಡೆಯನ್ನು ಬಿಡಿಸಿದರೆ 6.8 ಮೀಟರ್ ಉದ್ದದ ನೆಲಕ್ಕೆ ಚಾಪೆಯಂತೆ ಹಾಸಬಹುದು, ತಲೆಯ ಮೇಲೆ ಸುರುಳಿ ಸುತ್ತಿದರೆ ದೊಡ್ಡ ಹೆಬ್ಬಾವು ಮಲಗಿದ ಹಾಗೆ ಕಾಣಿಸುತ್ತದೆ,

ಕ್ವಿ ಕ್ವಿಪಿಂಗ್ ನ ಈ ಕೂದಲಿನ ಬೆಟ್ಟಕ್ಕೆ ಐದು ದಶಕಗಳಷ್ಟು ವಯಸ್ಸಾಗಿದೆ. ಐವತ್ತು ವರ್ಷಗಳ ಹಿಂದಿನವರೆಗೂ ಈತ ಕೂದಲು ಕತ್ತರಿಸಿಕೊಂಡಿದ್ದ, ಆದರೆ ನಂತರ ಇವನಿಗೆ ಕೂದಲು ಬೆಳೆಸುವ ಬಯಕೆಯಾಯಿತು. ಇವನ ಮೂವತ್ತೆರಡನೇ ವಯಸ್ಸಿನಲ್ಲಿ ತಲೆಯಲ್ಲಿ ಜಡೆಗಟ್ಟಿದ ಕೂದಲಿನ ಎಳೆಯೊಂದು ಕಾಣಿಸಿತು. ಅದನ್ನು ಕತ್ತರಿಸದೆ ಹಾಗೆಯೇ ಬಿಟ್ಟ. ಬೆಳೆಯುತ್ತ ಬಂತು. ಈಗ ಅವನಿಗಿಂತ ಉದ್ದವಿದೆ ಕೂದಲು. ಮಲಗುವಾಗ ಇದನ್ನು ಮಡಚಿ ದಿಂಬಿನ ಹಾಗೆ ತಲೆಯ ಕೆಳಗಿಟ್ಟುಕೊಂಡು ಮಲಗುತ್ತಾನೆ. 'ಸ್ನಾನ ಮಾಡುವಾಗ ಆಗಾಗ ತಲೆಗೂದಲನ್ನು ತಿಕ್ಕಿ ಗಿಡಮೂಲಿಕೆಗಳ ರಸವನ್ನು ಹಚ್ಚಿಕೊಳ್ಳುತ್ತೇನೆ. ಅದರಿಂದ ಹೇನುಗಳಾಗುವುದೇ ಇಲ್ಲ' ಎನ್ನುತ್ತಾನೆ ಈತ. ಮಕ್ಕಳಿಗೆ ಖುಷಿ ಕೊಡಲೆಂದು ಜಡೆಗಟ್ಟಿದ ಈ ಕೂದಲಿನ ಹಗ್ಗವನ್ನು ಮೈಗೆಲ್ಲ ಸುತ್ತಿಕೊಂಡು ವಿವಿಧ ಭಂಗಿಗಳಲ್ಲಿ ನಿಂತು ಅದರ ಸೊಬಗನ್ನು ಪ್ರದರ್ಶಿಸುತ್ತಾನೆ. ಈಗ ಈ ಭಾರೀ ಕೂದಲು ಗಿನ್ನೆಸ್ ದಾಖಲೆ ಸೇರಿದೆ.

■ ಪ. ರಾಮಕೃಷ್ಣ ಶಾಸ್ತ್ರಿ